ಮತ್ತು ಸಭಾಪತಿಯವರ ಮೆಚ್ಚುಗೆಯನ್ನು ಪಡೆದಿದ್ದರೆಂಬುದನ್ನು ಪ್ರಸ್ತಾಪ ಮಾಡಬೇಕಾಗಿದೆ. ಅವರು ಗಳು ಈ ಮನೆಗಳಲ್ಲಿ ಮಾತ್ರವಲ್ಲದೆ ಅನೇಕ ಸಮಿತಿಗಳಲ್ಲಿಯೂ ಸಹ ಭಾಗವಹಿಸಿ ಅವರ ಸೇವೆಯನ್ನು ಸಲ್ಲಿಸಿದ್ದಾರೆ. ಮತ್ತು ಮಾನ್ಯ ಸದಸ್ಯರುಗಳ ಮೆಚ್ಚುಗೆಯನ್ನು ಕೂಡ ಗಳಿಸಿದ್ದಾರೆಂಬ ಮಾತನ್ನು ಹೇಳುತ್ತಿದ್ದೇನೆ. ಈ ಸದನದಲ್ಲಿ, ಹಿಂದೆ ಇದ್ದ ಕಾರ್ಯದರ್ಶಿಯವರನ್ನು ಮತ್ತು ಅಡಿಷನಲ್ ಕಾರ್ಯದರ್ಶಿಯವರನ್ನು (ಅವರ ಸೇವೆಯನ್ನು ಪ್ರಶಂಸಿಸಿ) ನಿರ್ಣಯಮಾಡತಕ್ಕ ಒಂದು ಸಂಪ್ರದಾಯ ನಡೆದುಕೊಂಡು ಬಂದಿದೆ. ಆದಕ್ಕನುಗುಣವಾಗಿ ಈ ವಿಶೇಷ ಸೂಚನೆಯನ್ನು ಮಾನ್ಯ ಮುಖ್ಯ ಮಂತ್ರಿಯವರು ಈ ಸಭೆಯ ಮುಂದೆ ಮಂಡಿಸಿ ಮಾತನಾಡಿದ್ದಾರೆ ಮತ್ತು ಅನೇಕ ಸದಸ್ಯರುಗಳೂ ಸಹ ಅದನ್ನು ಪುಷ್ಟೀಕರಿಸಿ ಮಾತನಾಡಿದ್ದಾರೆ. ಆದುದರಿಂದ ಈ ನಿರ್ಣಯಕ್ಕೆ ತಾವೆಲ್ಲರೂ ಸರ್ವಾನುಮತದಿಂದ ಒಪ್ಪಿಗೆ ಕೊಟ್ಟು ನಂತರ ಈ ನಿರ್ಣಯದ ಒಂದು ನಕಲನ್ನು ನಾವು ಅವರುಗಳಿಗೆ ಕಳುಹಿಸಿಕೊಡುವುದಕ್ಕೆ ಒಪ್ಪಿಗೆ ನೀಡುತ್ತೀರೆಂದು ನಂಬಿ ಮತ್ತೊಮ್ಮೆ ಈ ನಿರ್ಣಯಕ್ಕೆ ಬೆಂಬಲ ಕೊಡಬೇಕೆಂದು ಹೇಳಿ ನನ್ನ ಪುಟ್ಟ ಭಾಷಣವನ್ನು ಮುಗಿಸುತ್ತೇನೆ.

ಒಬ್ಬರು ಮಾನ್ಯ ಸದಸ್ಯರು.— ಮಾನ್ಯ ದೇವೇಗೌಡರ ಸಲಹೆ ಬಗ್ಗೆ ಏನು ಹೇಳುತ್ತೀರಿ ?

ಅಧ್ಯಕ್ಷರು.— ಅದನ್ನು ಪಾರ್ಲಿಮೆಂಟರಿ ಅಸೋಸಿಯೇಷನ್‌ನವರು ಮಾಡಲಿ.

SRI B. B. SAYANAK.— Sir, the Hon. Minister Sri Dharam Singh had agreed to make his statement today in response to the question raised by me yesterday.

SRI DHARAM SINGH.— Sir, I have already told that I will make a statement on 17th.

INCOME CERTIFICATES.—DIFFICULTIES FACED BY STUDENTS

SRI A. LAKSHMI SAGAR.— Sir, I have given a notice under Rule 312 of a very urgent matter ; otherwise I would not have troubled your goodself. The matter relates to the students, large number of boys and girls.

MR. SPEAKER.— I will see to it.

SRI A. LAKSHMI SAGAR.— No. Sir, I do not want to prolong this issue because there is no controversy in the matter as such. Even, the hon. members from the Treasury Benches would agree withme. I raised this issue in 1978, in 1979 and I am raising it in this session also. The matter relates to students, large number of boys and girls who are waiting at the office of the Tahsildar, Bangalore. There is a huge crowd and unending ques. The Revenue officers at that level have not been able to make proper, efficient and reasonable arrangements for issuing Income Certificates and other documents to the students, who are seeking admission to various educational institutions. The situation is worse than what it was in 1978 and 1979. This matter was raised before and my learned friend Sri B. Basavalingappa, the then Minister incharge of Revenue portfolio, promised to set right all these things, but nothing was done. Now, if something is not done, the situation will worsen. These young

boys and girls are being fleeced and the situation is scandalous. The Income Certificates are being sold at Rs. 2 to Rs. 5 without ascertaining the income of the parents. The situation was so bad yesterday and day before yesterday that the police had to be called and the students waiting for collecting the certificates were lathi-charged. The parents are being harassed. What are the criteria that are being adopted for issuing the certificates ? Are the Revenue Inspectors & Revenue authorities not in a position to ascertain the income of the parents or guardians ? I went there yesterday evening I am going there everyday. The additional Deputy Commissioner and the Deputy Commissioner were not there, when I went to see them. If it had happened for the first time, I would not have been so unhappy and angry as I am today. This is the situation. I request through you, sir, the Government to protect the interests of these thousands of young boys and girls. I would like you to come there with me on my Scooter and see their miserable plight.

ಶ್ರೀ ಎಂ. ಚಂದ್ರಶೇಖರ್ (ಜಯನಗರ).— ಸನ್ಮಾನ್ಯ ಅಧ್ಯಕ್ಷರೇ, ಇದು ವರ್ಷೇ ವರ್ಷೇ ಆಗರೆ ತ್ತಿರುವ ಪ್ರಸಂಗ. ಪ್ರತಿ ವರ್ಷ ಹುಡುಗರು ಶಾಲೆಗೆ ಸೇರುವಾಗ ಇನ್‌ಕಂ ಸರ್ಟಿಫಿಕೇಟ್ ತೆಗೆದು ಕೊಂಡು ಹೋಗಿ ಕೊಡಬೇಕೆಂಬ ಪದ್ಧತಿ ಇದೆ. ತಂದೆ ತಾಯಿಗಳ ವರಮಾನ ಈ ವರ್ಷ ಹೆಚ್ಚಾಗಿರಬಹುದೆಂಬ ಆನುಮಾನದಿಂದ ಆ ಒಂದು ಸರ್ಟಿಫಿಕೇಟನ್ನು ಪ್ರತಿ ವರ್ಷ ಕೇಳುತ್ತಾರೆ. ಕಳೆದ ವರ್ಷ ಸರ್ಟಿಫಿಕೇಟ್ ತೆಗೆದುಕೊಂಡಿದ್ದು ಅದೇ ಶಾಲೆಗೆ ಈ ವರ್ಷ ಹೋಗುವುದಾದರೆ ಅದೇ ಸರ್ಟಿಫಿಕೇಟಿನ ಆಧಾರದ ಮೇಲೆ ಅವಕಾಶ ಕೊಡುವುದರಲ್ಲಿ ಏನು ಪ್ರಮಾದ ಇಲ್ಲ. ಕಳೆದ ವರ್ಷ ೧೫೦೦ ರೂಪಾಯಿ ವರಮಾನ ಇದ್ದುದು ಒಮ್ಮೆಲೇ ಮಾರು ವರ್ಷಕ್ಕೆ ೧೦ ಸಾವಿರಕ್ಕೆ ಹೇಗೆ ಹೋಗುತ್ತದೆ. ಎಲ್ಲೋ ಒಂದೆರಡು ಪ್ರಕರಣಗಳು ಆ ರೀತಿ ಇದ್ದರೆ ಅವುಗಳನ್ನು ಸರ್ಕಾರ ಕಂಡುಹಿಡಿಯಬಹುದು ಅದನ್ನು ಬಿಟ್ಟು ಸಾವಿರಾರು ಜನರಿಗೆ ಪ್ರತಿ ವರ್ಷವೂ ಸರ್ಟಿಫಿಕೇಟುಗಳನ್ನು ಕೊಡಿ ಎಂದು ಹೇಳುವುದು ಸೂಕ್ತವಲ್ಲ. ಇದೇ ಬೆಂಗಳೂರಿನ ತಾಲ್ಲೂಕು ಕಚೇರಿಯ ಹತ್ತಿರ ನಾನು ಮಾನ್ಯ ಲಕ್ಷ್ಮೀಸಾಗರ್‌ರವರು ಕೂಡಿ ಹೋಗಿ ನೋಡಿದಾಗ ಅಲ್ಲಿ ಒಬ್ಬರ ಮೇಲೆ ಒಬ್ಬರು ಬಿದ್ದು ಅರ್ಜಿಗಳನ್ನು ಕೊಡುತ್ತಿದ್ದರು. ನಂತರ ಒಂದು ಫೀಜನ್ನು ತೆಗೆದು ಕೊಂಡು ತಹಸೀಲ್ದಾರರು ಸರ್ಟಿಫಿಕೇಟ್ ಕೊಡುತ್ತಾರೆ. ಇದು ನಿಜವಾದ ಸರ್ಟಿಫಿಕೇಟೇ ಎಂದು ಅನುಮಾನ ಬರುತ್ತದೆ. ಏಕೆಂದರೆ, ರೆವಿನ್ಯೂ ಇನ್‌ಸ್ಪೆಕ್ಟರನ್ನು ವಿಚಾರಿಸಿ ಮಾಡುವಷ್ಟು ಕಾಲಾವಕಾಶ ಅಲ್ಲಿ ಇಲ್ಲ. ಈ ಒಂದು ವ್ಯವಸ್ಥೆಯನ್ನು ಮೊದಲೇ ಮಾಡಬೇಕಿತ್ತು. ವರ್ಷದಲ್ಲಿ ಯಾವಾಗಲಾದರೂ ಒಂದು ಸಾರಿ ಕೊಡುವಂತೆ ಮಾಡಬೇಕಿತ್ತು. ಇದೇ ಸಂದರ್ಭದಲ್ಲಿ ಆಗಬೇಕೆಂಬ ಕಟ್ಟಲೆ ಇರುವುದರಿಂದ ಹುಡುಗರಿಗೆ ಬಹಳ ತೊಂದರೆಯಾಗುತ್ತಿದೆ. ಆದ್ದರಿಂದ, ಇದಕ್ಕೆ ಬೇರೆ ಏನಾದರೂ ವ್ಯವಸ್ಥೆಯನ್ನು ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಶ್ರೀ ಪಿ. ರಾಮದೇವ್ (ಮಲ್ಲೇಶ್ವರಂ).— ಮಾನ್ಯ ಅಧ್ಯಕ್ಷರೇ, ಮಾನ್ಯ ಕಂದಾಯ ಸಚಿವರಾದ ಬಂಗಾರಪ್ಪನವರು ಹಿಂದಿನ ದಿನಗಳಲ್ಲಿ ಕೋರ್ಟ್ ಕಾಂಪೌಂಡಿನಿಂದಲೇ ಕನ್ನಡ ಚಳುವಳಿ ಮಾಡುತ್ತಿದ್ದರು. ಅವರಿಗೆ ಆ ಜಾಗ ಗೊತ್ತಿದೆ. ದಯವಿಟ್ಟು ಈಗ ಅಲ್ಲಿ ಹೋಗಿ ನೋಡಬೇಕು. ಅಲ್ಲಿ ವಿದ್ಯಾರ್ಥಿಗಳು ಸರ್ಟಿಫಿಕೇಟುಗಳನ್ನು ಪಡೆಯಲು ಯಾವರೀತಿ ಕ್ಯೂ ನಿಂತಿದ್ದಾರೆ ಎಂಬುದನ್ನು ಸ್ವತ: ನೋಡಿ ಬರಬೇಕು ಸ್ವಲ್ಪ ಅಲಕ್ಷ್ಯ ಮಾಡಿದರೆ ಅಲ್ಲಿರುವ ಹುಡುಗರು ಇಡೀ ಕಟ್ಟಡವನ್ನು ಧ್ವಂಸ ಮಾಡುವ ಪರಿಸ್ಥಿತಿ ಬರಬಹುದು. ಸಹಸ್ರಾರು ವಿದ್ಯಾರ್ಥಿಗಳು ಸರ್ಟಿಫಿಕೇಟುಗಳಿಗಾಗಿ ಕಾದುಕೊಂಡು ಅಲ್ಲಿ ನಿಂತಿದ್ದಾರೆ. ಪ್ರತಿ ವರ್ಷವೂ ಈ ವಿಷಯವನ್ನು ಸರ್ಕಾರದ ಗಮನಕ್ಕೆ ತರುತ್ತಲೇ ಬರುತ್ತಾ ಇದ್ದೇವೆ ಆದರೂ ಏನೂ ಪ್ರಯೋಜನವಾಗಲಿಲ್ಲ. ಹಾಡಿದ್ದೇ ಹಾಡೋ ಕಿಸಬಾಯಿದಾಸ ಎನ್ನುವಹಾಗೆ ನಾವು ಹೇಳಿದ್ದನ್ನೇ ಹೇಳುತ್ತಿರುತ್ತೇವೆ, ಮಂತ್ರಿಗಳು ಏನೋ ಒಂದು ಭರವಸೆಯನ್ನು ಕೊಡುತ್ತಿರುತ್ತಾರೆ, ನಂತರ ಮಂತ್ರಿಗಳು ಬದಲಾವಣೆ ಯಾಗುತ್ತಿರುತ್ತಾರೆ. ಪರಿಹಾರವಂತೂ ಸಿಗುತ್ತಿಲ್ಲ. ಈಗ ಹೇಗೆ ನಡೆಯುತ್ತಿದೆಯೆಂದರೆ ನಾವು (ಶಾಸ

ಕರು) ಏನು ಸರ್ಟಿಫಿಕೇಟುಗಳನ್ನು ಕೊಡುತ್ತೇವೆ ಅದರ ಆಧಾರದ ಮೇಲೆ ರೆವಿನ್ಯೂ ಅಧಿಕಾರಿಗಳು ಆಧಾಯದ ಸರ್ಟಿಫಿಕೇಟುಗಳನ್ನು ಮತ್ತು ಜಾತಿ ಸರ್ಟಿಫಿಕೇಟುಗಳನ್ನು ಕೊಡುತ್ತಿದ್ದಾರೆ. ಆದ್ದರಿಂದ ನಾನು ಸಲಹೆ ಕೊಡುವುದೇನೆಂದರೆ ಶಾಸಕರೇ ಆ ಸರ್ಟಿಫಿಕೇಟ್‌ಗಳನ್ನು ಕೊಡುವಂತೆ ಅಧಿಕಾರ ಕೊಡಿ. ಹಿಂದೆ ಈ ರೀತಿ ಕೊಡುತ್ತಿದ್ದೆವು. ಅದೇ ರೀತಿ ಈಗಲೂ ಸರ್ಟಿಫಿಕೇಟ್ ಕೊಡುವುದಕ್ಕೆ ಅಧಿಕಾರ ಕೊಟ್ಟರೆ ಈ ತೊಂದರೆಗಳು ತಪ್ಪುತ್ತದೆ. ಅಧಿಕಾರಿಗಳಿಗಿಂತ ನಮಗೆ ನಮ್ಮ ಕ್ಷೇತ್ರದ ವಿಚಾರಗಳು ಹೆಚ್ಚಾಗಿ ಗೊತ್ತಿರುತ್ತವೆ. ನಾವು ಏನು ಸರ್ಟಿಫಿಕೇಟ್ ಕೊಡುತ್ತೇವೋ ಅದರ ಆಧಾರದ ಮೇಲೆ ಅವರು ಸರ್ಟಿಫಿಕೇಟುಗಳನ್ನು ಕೊಡುತ್ತಿದ್ದಾರೆ. ಆದ್ದರಿಂದ ಈ ಸಮಸ್ಯೆ ಪರಿಹಾರ ಮಾಡಬೇಕಾಗಿದ್ದರೆ ಆ ಅಧಿಕಾರವನ್ನು ಶಾಸಕರಿಗೆ ಕೊಡಿ ಎಂದು ಸಲಹೆ ಮಾಡುತ್ತಿದ್ದೇನೆ.

ಶ್ರೀ ಎಸ್. ಎಸ್. ಆರಕೇರಿ.— ತಹಸೀಲ್ದಾರ್ ಕಚೇರಿಗೆ ಹೋಗಿ ನೋಡಿದ್ದೇನೆ. ಅಲ್ಲಿ ಸುಮಾರು ೧೦ ಸಾವಿರ ವಿದ್ಯಾರ್ಥಿಗಳು ಕ್ಯೂನಲ್ಲಿ ಸರ್ಟಿಫಿಕೇಟಿಗಾಗಿ ಕಾದು ನಿಂತಿದ್ದಾರೆ. ಹೆಣ್ಣು ಮಕ್ಕಳೂ ನಿಂತಿರುತ್ತಾರೆ. ಹರಿಜನ ಗಿರಿಜನ ವರ್ಗದವರಿಗೆ ಸರ್ಟಿಫಿಕೇಟು ಪಡೆಯಲು ತುಂಬಾ ಕಷ್ಟವಾಗಿದೆ. ಆದ್ದರಿಂದ ನನ್ನ ಸಲಹೆ ಏನೆಂದರೆ ಪ್ರತಿವರ್ಷ ಶಾಲೆಗೆ ಅಥವಾ ಕಾಲೇಜಿಗೆ ಸೇರಿಸುವಾಗ ಜಾತಿ ಸರ್ಟಿಫಿಕೇಟುಗಳನ್ನು ಕೇಳುವುದನ್ನು ರದ್ದು ಮಾಡಬೇಕು. ಒಂದು ಬಾರಿ ಅವನು ಶಾಲೆಗೆ ಸೇರುವಾಗ ಕೊಟ್ಟರೆ ಅಷ್ಟೇ ಸಾಕು ಒಂದು ಶಾಲೆಯಿಂದ ಮತ್ತೊಂದು ಶಾಲೆಗೆ ಹೋದರೆ ಮತ್ತೆ ಕೇಳುವುದು ತಪ್ಪಬೇಕು. ಪ್ರತಿವರ್ಷ ಏನೂ ಜಾತಿ ಬದಲಾಗುವುದಿಲ್ಲ. ಆದ್ದರಿಂದ ಹರಿಜನ ಗಿರಿಜನ ಎಂದು ಮೊದಲು ಶಾಲೆಗೆ ಸೇರುವಾಗ ಕೊಟ್ಟರೆ ಕಾಲೇಜು ಬಿಡುವವರೆಗೆ ಮತ್ತೆ ಕೇಳಬಾರದು ಎಂದು ನಿಯಮ ಮಾಡಬೇಕು. ಇದರಿಂದ ಮಕ್ಕಳಿಗೆ ಆಗುವ ತೊಂದರೆ ತಪ್ಪುತ್ತದೆ ಆದ್ದರಿಂದ ಮಾನ್ಯ ಕಂದಾಯ ಮಂತ್ರಿಗಳು ಈ ಸಲಹೆಯನ್ನು ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

SRI B.B. SAYANAK.—Mr. Speaker, Sir, the Income Certificate is most important to the student world. The Schools and Colleges are demanding income certificate from the students. In order to obtain an income certificate a student is expected to submit an affidavit on a stamp paper worth Rs. 7-50. In addition they are required to spend another Rs. 20 to 30 which is being demanded by the Revenue Officials. As I could see, to get a certificate, a student is expected to spend Rs. 20 to Rs 30 This is a very tedious job for the students. The students are going to the Tahsildar's office everyday but they are unable to obtain certificates. I therefore request the Government that they must simplify the procedure for obtaining income certificates.

† ಶ್ರೀ ಮಳ್ಳೂರು ಆನಂದರಾವ್ (ರಾಜಾಜಿನಗರ).—ಮಾನ್ಯ ಅಧ್ಯಕ್ಷರೇ, ಈಗ ಅಲ್ಲಿರುವ ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳಬೇಕು ಎಂದು ನನ್ನ ಪ್ರಾರ್ಥನೆ. ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ. ಫಲಿತಾಂಶಗಳು ಬಂದು ಒಂದು ವಾರವಾಯಿತು. ಕಾಲೇಜುಗಳಿಗೆ ಮಕ್ಕಳು ಸೇರಬೇಕಾಗಿದೆ. ಅವರು ಕಾಲೇಜಿಗೆ ಅಥವಾ ಶಾಲೆಗಳಿಗೆ ಸೇರಬೇಕಾದರೆ ಹಲವಾರು ಸರ್ಟಿಫಿಕೇಟುಗಳನ್ನು ನೀಡಬೇಕಾಗಿದೆ. ಆದಾಯದ ಬಗ್ಗೆ, ಜಾತಿಯ ಬಗ್ಗೆ ಸರ್ಟಿಫಿಕೇಟುಗಳನ್ನು ನೀಡಬೇಕು. ಜಿಲ್ಲಾ ಕಚೇರಿಯ ಆವರಣದಲ್ಲಿ ಸರ್ಟಿಫಿಕೇಟುಗಳಿಗೆ ಕಾದಿರುವ ವಿದ್ಯಾರ್ಥಿಗಳನ್ನು ನೋಡಬೇಕು. ಸುಮಾರು ೬ ಸಾವಿರದಿಂದ ೮-೧೦ ಸಾವಿರ ವಿದ್ಯಾರ್ಥಿಗಳು ಅಲ್ಲಿ ಸರ್ಟಿಫಿಕೇಟುಗಳಿಗಾಗಿ ಕಾದು ನಿಂತಿದ್ದಾರೆ. ಅಲ್ಲಿ ಒಂದು ದೊಡ್ಡ ಜಾತ್ರೆ ಇದ್ದ ಹಾಗೆ ಇದೆ. ಇನ್ನೊಂದು ವಿಷಯವನ್ನು ಮಾನ್ಯ ಕಂದಾಯ ಸಚಿವರಾದ ಬರ್ಗಾರಪ್ಪನವರು ಲಕ್ಷ್ಯದಲ್ಲಿಟ್ಟುಕೊಳ್ಳಬೇಕಾಗಿದೆ. ಏನೆಂದರೆ ತಾಂತ್ರಿಕ ಸಂಸ್ಥೆಗಳಿಗೆ ಪ್ರವೇಶಕ್ಕೆ ಅರ್ಜಿ ಸಲ್ಲಿಸಲು ಈ ತಿಂಗಳ ೧೬ನೇ ತಾರೀಖು ಕೊನೆಯ ದಿನ. ೧೬ನೇ ತಾರೀಖು ಕೊನೇದಿನ ಎಂದರೆ ಹುಡುಗರು ಸರ್ಟಿಫಿಕೇಟುಗಳನ್ನು ಪಡೆದು ಕೊಡುವುದಕ್ಕೆ ಸಾಧ್ಯವೇ ಎಂಬುದನ್ನು ಯೋಚನೆ ಮಾಡಬೇಕು. ಒಂದು ದಿನಕ್ಕೆ ನೆವಿನ್ಯೂ ಕಚೇರಿಯಲ್ಲಿ ಎಷ್ಟು ಜನ ವಿದ್ಯಾರ್ಥಿಗಳಿಗೆ

ಸರ್ಟಿಫಿಕೇಟುಗಳನ್ನು ಕೊಡುವುದಕ್ಕೆ ಸಾಧ್ಯ? ಅಲ್ಲಿ ಲಂಚ ಕೊಡದಿದ್ದರೆ ಯಾವ ಕೆಲಸವೂ ಆಗುವುದಿಲ್ಲ. ಒಂದು ಕಡೆ ಕಾಯಬೇಕು, ಇನ್ನೊಂದು ಕಡೆ ಲಂಚ ಕೊಡಬೇಕು ಇಷ್ಟಾಗೂ ಕೂಡ ಅಲ್ಲಿ ಸಿಗತಕ್ಕ ಸರ್ಟಿಫಿಕೇಟುಗಳು ಅಫೆಂಟಿಕೇಟ್ ಅಲ್ಲ. ೧೦ ರೂಪಾಯಿ ಕೊಟ್ಟರೆ ಸೀಲುಹಾಕಿ ಕೊಡುತ್ತಾರೆ. ದುಡ್ಡು ಕೊಟ್ಟವರಿಗೆ ಕೊಡುವ ವ್ಯವಸ್ಥೆ ಅಲ್ಲಿದೆ. ಬೆಳಿಗ್ಗೆಯಿಂದ ಸಂಜೆಯವರೆಗೆ ಹುಡುಗರು ಪರದಾಡ ಬೇಕಾಗಿದೆ. ಆದ್ದರಿಂದ ದಯವಿಟ್ಟು ಮಾನ್ಯ ಬಂಗಾರಪ್ಪನವರು ಇದಕ್ಕೊಂದು ಪರ್ಯಾಯ ವ್ಯವಸ್ಥೆ ಯನ್ನು ಕೂಡಲೇ ಮಾಡಬೇಕು. ದಯವಿಟ್ಟು ವಿದ್ಯಾರ್ಥಿಗಳು ರಸ್ತೆಗಿಳಿಯುವುಕ್ಕೆ ಮೊದಲು ನೀವು ಮತ್ತು ವಿದ್ಯಾಮಂತ್ರಿಗಳು ಕುಳಿತು ಚರ್ಚೆ ಮಾಡಿ ಒಂದು ವ್ಯವಸ್ಥೆ ಮಾಡಬೇಕು. ಬೇಕಾದರೆ ನಮ್ಮನ್ನೂ ಸಭೆಗೆ ಕರೆದರೆ ನಾವೂ ಬರುತ್ತೇವೆ. ಅಲ್ಲಿ ೧೦ ರೂಪಾಯಿ ಕೊಟ್ಟರೆ ಸೀಲು ಹಾಕಿ ಸರ್ಟಿಫಿಕೇಟುಗಳನ್ನು ಕೊಡುತ್ತಾರೆ. ಆದರ ಬದಲು ಹಿಂದೆ ಇದ್ದಂತೆ ನಮಗೇ ಸರ್ಟಿಫಿಕೇಟುಗಳನ್ನು ಕೊಡುವ ಅಧಿಕಾರವನ್ನು ಏತಕ್ಕೆ ಕೊಡಬಾರದು ಎಂಬ ಬಗ್ಗೆ ಮಾನ್ಯ ಮಂತ್ರಿಗಳು ಯೋಚನೆ ಮಾಡ ಬೇಕು.

† SRI C. M. ARMUGHAM.—Mr. Speaker, Sir, the students community are facing great difficulty in securing caste certificates as well as income certificates. To obtain these certificates, they are required to approach the Tahsildar. Before approaching the Tahsildar the students are expected to get a certificate from the Revenue Inspector who will always be on tour. Even the Tahsildar will not be available to issue the certificates for four or five days in a week as he will be busy in disposing of tribunal cases. Formerly, such certificates used to be issued by the M.L As., and M.Ps., This power was withdrawn by the former Revenue Minister Sri Basavalingappa. Probably Sri Basavalingappa thought that the certificates issued by the M.L.As., and M.P., were not genuine. Since we happen to be the elected representatives of the people the power of issuing such certificates must vest with the M.L.As., and M.Ps. If these people do not attend to this small work it would be difficult for them to face them at the time of elections. I submit to the Government to revise the decision taken by Sri. Basavalingappa, the former Minister for Revenue and authorise the M.L As., and M.Ps., to issue the income and caste certificates. I hope and trust that the Chief Minister will bestow his attention to this suggestion. In order to ease the present situation I request you to please vest this power with M.L.As., and M.Ps.

† ಶ್ರೀ ಹೆಚ್. ಡಿ. ದೇವೇಗೌಡ (ಹೊಳೇನರಸೀಪುರ).—ಮಾನ್ಯ ಅಧ್ಯಕ್ಷರೆ, ಈ ಆದಾಯದ ಸರ್ಟಿಫಿಕೇಟುಗಳನ್ನು ಮತ್ತು ಜಾತಿಯ ಬಗ್ಗೆ ಸರ್ಟಿಫಿಕೇಟುಗಳನ್ನು ಪಡೆಯಬೇಕಾದರೆ ಬಹಳ ಗೊಂದಲವಾಗುತ್ತಿದೆ, ವಿದ್ಯಾರ್ಥಿಗಳು ಬಹಳ ತೊಂದರೆಪಡುತ್ತಿದ್ದಾರೆ ಎಂದು ಮಾನ್ಯ ಸದಸ್ಯರು ಹೇಳಿದರು. ನನ್ನ ದೃಷ್ಟಿಯಲ್ಲಿ ಹೇಳುವುದಾದರೆ ೧೦೦ಕ್ಕೆ ೯೨ ಜನ ವಿದ್ಯಾರ್ಥಿಗಳು ಅವರು ಯಾವುದೇ ಜಾತಿಯವರಿರಲಿ, ಯಾವುದೇ ವರ್ಗದವರಿರಲಿ ಇದರ ಲಾಭವನ್ನು ಪಡೆಯುತ್ತಿದ್ದಾರೆ. ಇನ್ನು ೮ ಪರ್ಸೆಂಟಿನಷ್ಟು ಜನ ಪಡೆಯುತ್ತಿಲ್ಲ. ಯಾರಿಗೆ ೧೦ ಸಾವಿರ ರೂಪಾಯಿಗಿಂತ ಕಡಿಮೆ ವರಮಾನ ಇರುತ್ತದೆ ಅಂಥವರಿಗೆ ಈ ಸವಲತ್ತನ್ನು ಕೊಡುತ್ತಿದ್ದರು ಈಗ ಬ್ರಾಹ್ಮಣರಾಗಿರಲಿ, ಲಿಂಗಾಯಿತ ರಾಗಿರಲಿ, ಪೈಶ್ಯರಾಗಿರಲಿ, ಒಕ್ಕಲಿಗರಾಗಿರಲಿ, ಯಾರೇ ಆಗಿರಲಿ ಇಂತಿಷ್ಟು ವರಮಾನಕ್ಕಿಂತ ಕಡಿಮೆ ಇದ್ದರೆ ಅವರು ರಿಯಾಯಿತಿಯನ್ನು ಪಡೆಯುತ್ತಿದ್ದಾರೆ. ಸರ್ಕಾರಿ ಅಧಿಕಾರಿಗಳು ಸುಳ್ಳು ಸರ್ಟಿಫಿಕೇಟು

ಗಳನ್ನು ಕೊಡುವುದಕ್ಕಾಗುವುದಿಲ್ಲ. ಆದರೆ ಉಳಿದವರೆಲ್ಲಾ ಸಾಧ್ಯವಾದಮಟ್ಟಿಗೆ ಸುಳ್ಳು ಸರ್ಟಿಫಿಕೇಟುಗಳನ್ನು ಕೊಟ್ಟು ಶುಲ್ಕ ವಿನಾಯಿತಿಯನ್ನು ಪಡೆಯುವುದಕ್ಕೆ ಪ್ರಯತ್ನ ಮಾಡುತ್ತಾರೆ. ಅಂದರೆ ೯೨ ಪರ್ಸೆಂಟ್ ವಿದ್ಯಾರ್ಥಿಗಳು ವಿನಾಯಿತಿಯನ್ನು ಪಡೆಯುತ್ತಿರುವಾಗ ಇನ್ನು ೮ ಪರ್ಸೆಂಟ್ ವಿದ್ಯಾರ್ಥಿಗಳು ಪಡೆಯದಿದ್ದರೆ ಸರ್ಕಾರಕ್ಕೆ ಎಷ್ಟು ಉಳಿತಾಯವಾಗುತ್ತದೆ? ಇದರ ಬದಲು ಆದಾಯ ಮಿತಿ ಇಂತಿಷ್ಟು ಎಂದು ಏನು ನಿಗದಿ ಮಾಡಿದ್ದೀರಿ ಇದನ್ನು ಸಂಪೂರ್ಣವಾಗಿ ಕಿತ್ತುಹಾಕಿದರೆ ಎಲ್ಲವರ್ಗದ ಮಕ್ಕಳಿಗೂ ಶುಲ್ಕ ವಿನಾಯಿತಿ ಲಾಭ ಸಿಗುತ್ತದೆ. Ninety per cent of the students are getting this benefit whether it is a genuine certificate or not.

೨-೩೦ ಪಿ.ಎಂ.

ಇನ್ನು ಎಂಟು ಪರ್ಸೆಂಟ್‌ನವರಿಗೆ ಕೊಡದೆ ಸರ್ಕಾರದವರು ಇನ್ನೆಷ್ಟು ಉಳಿತಾಯ ಮಾಡುತ್ತಾರೆ? ಆದುದರಿಂದ, ದೃಢೀಕರಣ ಪತ್ರ ನೀಡುವಿಕೆಯನ್ನು ಸಂಪೂರ್ಣವಾಗಿ ತೊಡೆದು ಹಾಕಿ ಎಲ್ಲ ರೀತಿಯ ಶಿಕ್ಷಣ ಸೌಲಭ್ಯವನ್ನು ರಾಜ್ಯದ ಎಲ್ಲ ಮಕ್ಕಳಿಗೂ ಪುಕ್ಕಟೆಯಾಗಿ ನೀಡುವ ನಿರ್ಣಯವನ್ನು ಸರ್ಕಾರ ತೆಗೆದುಕೊಳ್ಳಬೇಕು. ಆ ರೀತಿ ಹೊಸ ನಿರ್ಣಯವನ್ನು ತಮ್ಮ ನಾಯಕತ್ವದಲ್ಲಿ ಮಾಡುವುದಕ್ಕೆ ಸಾಧ್ಯವೆ?

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ಈ ವಿಚಾರದ ಬಗ್ಗೆ ಮಾತನಾಡಬೇಕೆಂದು ನನಗೆ ಇಚ್ಛೆ ಇದ್ದಿರಲಿಲ್ಲ. ಮಾನ್ಯ ಆರ್ಯಾಗಂ ಮತ್ತು ಲಕ್ಷ್ಮೀಸಾಗರ್ ಅವರು ನನ್ನ ಹೆಸರನ್ನು ಎಳೆದಿದ್ದಾರೆ. ಆದಕ್ಕಾಗಿ ಮಾತನಾಡಬೇಕೆಂದು ಎದ್ದುನಿಂತಿದ್ದೇನೆ.

ಶ್ರೀ ಆರ್. ಗುಂಡೂರಾವ್.—ನಿಮ್ಮ ಉತ್ತರ ಎಲ್ಲರಿಗೂ ಗೊತ್ತೇ ಇದೆಯಲ್ಲಾ?!

ಶ್ರೀ ಬಿ. ಬಸವಲಿಂಗಪ್ಪ.—ನಿಮಗೆ ಗೊತ್ತಿದೆ, ಆದರೆ ಎಲ್ಲರಿಗೂ ಗೊತ್ತಿಲ್ಲ. ದೃಢೀಕರಣ ಪತ್ರ ನೀಡುವುದರ ಬಗ್ಗೆ ಇದೇ ರೀತಿಯ ನಿಷ್ಕೂರ ದೂರುಗಳು ಹಿಂದೆ ಬರುತ್ತಿದ್ದವು. ಆಗ ನಾವು ಅದಕ್ಕಾಗಿಯೇ ಒಬ್ಬಿಬ್ಬರು ತಹಶೀಲ್ದಾರರುಗಳನ್ನು ಇಟ್ಟು ಎಲ್ಲರಿಗೂ ದೃಢೀಕರಣ ಪತ್ರ ನೀಡುವ ಒಂದು ಹೊಸ ವ್ಯವಸ್ಥೆ ಮಾಡಿದ್ದೆವು. ನಂತರ, ಸುಳ್ಳು ಸರ್ಟಿಫಿಕೇಟುಗಳನ್ನು ತೆಗೆದುಕೊಳ್ಳುವ ಅಭ್ಯಾಸ ಪ್ರಾರಂಭವಾಯಿತು. ಸಾಹುಕಾರರೂ ಸಹ ಬಡವರೆಂದು ಹೇಳಿ ದೃಢೀಕರಣ ಪತ್ರಗಳನ್ನು ಪಡೆಯುವುದು ಪ್ರಾರಂಭವಾದ ಮೇಲೆ ಇದರ ಬಗ್ಗೆ ಸೂಕ್ತ ವ್ಯವಸ್ಥೆ ಮಾಡಲು ಸಚಿವ ಸಂಪುಟದ ಒಂದು ಉಪಸಮಿತಿಯನ್ನು ರಚನೆ ಮಾಡಲಾಯಿತು. ಅದರಲ್ಲಿ ನಾನು ಒಬ್ಬ ಸದಸ್ಯನಾಗಿದ್ದೆನು. ಅಲ್ಲಿ ನಾವೊಂದು ತೀರ್ಮಾನ ತೆಗೆದುಕೊಂಡು, ದೃಢೀಕರಣ ಪತ್ರ ಕೇಳುವವರ ಆದಾಯ ಎಷ್ಟು ಇದೆ ಮತ್ತು ಆಸ್ತಿ ಏನೇನಿದೆ ಎನ್ನುವುದನ್ನು ಪ್ರಮಾಣಪತ್ರದ ಮೂಲಕ ಕೊಟ್ಟಮೇಲೆ ಅವರಿಗೆ ಪರಮಾನ ದೃಢೀಕರಣ ಪತ್ರವನ್ನು ಕೊಡಬೇಕೆಂದು ಮಾಡಿದೆವು. ಪ್ರಮಾಣ ಪತ್ರ ಕೊಡಬೇಕೆನ್ನುವುದರ ಬಗ್ಗೆ ಕೆಲವರು ಸಂಶಯ ವ್ಯಕ್ತಪಡಿಸಿದ್ದಾರೆ. ಪ್ರಮಾಣ ಪತ್ರದಲ್ಲಿ ಕೊಟ್ಟಿರುವ ಆದಾಯವಿದೆಯೇ ಇಲ್ಲವೆ ಏನ್ನುವುದರ ಬಗ್ಗೆ ತನಿಖೆ ಮಾಡಬೇಕಾಗುತ್ತದೆ, ಬಡವರೆಂದು ಹೇಳಿಕೊಳ್ಳುವ ಸಾಹುಕಾರರಿಗೂ ದೃಢೀಕರಣ ಪತ್ರ ಕೊಟ್ಟರೆ ಹೇಗಾಗುತ್ತದೆ? ತಹಶೀಲ್ದಾರ್ ಮತ್ತು ಗ್ರಾಮಲೆಕ್ಕಿಗರನ್ನು ನಂಬಬೇಕಾಗುತ್ತದೆ. ಆದುದರಿಂದ, ಪ್ರಮಾಣ ಪತ್ರದ ಮೇಲೆ ತಹಶೀಲ್ದಾರರೇ ನೇರವಾಗಿ ದೃಢೀಕರಣ ಪತ್ರವನ್ನು ಕೊಡಬಹುದೆಂದು ಹುಕುಂ ಮಾಡಿದೆವು. ಮತ್ತು ಪ್ರಮಾಣ ಪತ್ರದಲ್ಲೇನಾದರೂ ಅಸತ್ಯವಾದುದಿದ್ದರೆ ಅವರ ಮೇಲೆ ಐ.ಪಿ.ಸಿ. ಪ್ರಕಾರ ಕ್ರಮ ತೆಗೆದುಕೊಳ್ಳಬೇಕೆಂತಲೂ ಮಾಡಿದ್ದೆವು.

ಶ್ರೀ ಮಳ್ಳೂರು ಆನಂದರಾವ್.—ಈಗಿರುವ ಪಾಸ್ತವಾಂಶ ತಹಶೀಲ್ದಾರರಿಗೆ ದೃಢೀಕರಣ ಪತ್ರಗಳನ್ನು ಕೊಡುವುದಕ್ಕೆ ಆಗುತ್ತಿಲ್ಲ, ಅಷ್ಟು ಜನಜಂಗುಳಿ ಇದೆ.

ಶ್ರೀ ಪಿ. ರಾಮದೇವ್.—ಮಾನ್ಯ ಬಸವಲಿಂಗಪ್ಪನವರು ಹಿಂದಿನ ಸರ್ಕಾರದ ನೀತಿಯನ್ನು ಹೇಳುತ್ತಿದ್ದಾರೆ. ಅದು ನಮಗೆ ಬೇಡ. ಹೊಸ ಸರ್ಕಾರದ ನೀತಿ ಏನಿದೆ ಎಂಬುದನ್ನು ಹೇಳುವುದಕ್ಕೆ ಬಿಡಿ.

ಶ್ರೀ ಬಿ. ಬಸವಲಿಂಗಪ್ಪ.—ನನ್ನ ಹೆಸರನ್ನು ಈ ವಿಚಾರದಲ್ಲಿ ಎಳೆದದ್ದಕ್ಕೆ ನಾನು ಇದನ್ನು ಹೇಳುತ್ತಿದ್ದೇನೆ. ದೂರು ಬಂದಮೇಲೆ ಅದನ್ನು ಸರಿಪಡಿಸಿದೆವು. ನಂತರ ದೂರುಗಳು ಬರಲಿಲ್ಲ,

ನಾವು ಅಳವಡಿಸಿದ್ದ ಪದ್ಧತಿಯನ್ನು ತೆಗೆದುಹಾಕಲಾಗಿದೆಯೋ ಅಥವಾ ಬಿಡಲಾಗಿದೆಯೊ ನನಗೆ ಗೊತ್ತಿಲ್ಲ. ಆದುದರಿಂದ, ಒಬ್ಬರು ಅಥವಾ ಇಬ್ಬರು ತಹಶೀಲ್ದಾರರನ್ನು ಇದಕ್ಕಾಗಿ ಇಟ್ಟು ಜಾಗ್ರತೆ ಮುಗಿಸಿಬಿಡಿ.

ಶ್ರೀ ಬಿ. ವಿ. ಕಕ್ಕಿಲಾಯ.—ಮಾನ್ಯ ಅಧ್ಯಕ್ಷರೇ, ದೃಢೀಕರಣ ಪತ್ರವಿಲ್ಲದ ಎಲ್ಲ ವಿದ್ಯಾರ್ಥಿಗಳಿಗೂ ಉಚಿತ ಶಿಕ್ಷಣ ನೀಡಬೇಕೆಂದು ತೀರ್ಮಾನ ಮಾಡಿದರೆ ಅದು ಬೇರೆ ಅದನ್ನು ನಾವು ಸ್ವಾಗತ ಮಾಡುತ್ತೇವೆ. ಆದರೆ, ಅರ್ಹರಿಗೆ ಕೊಡಬೇಕೆಂದು ಮಾಡಿದರೆ ಅದನ್ನು ಕಂಡುಹಿಡಿಯುವುದಕ್ಕೆ ವ್ಯವಸ್ಥೆ ಮಾಡಲೇಬೇಕು. ಲಕ್ಷಾಂತರ ಜನ ವಿದ್ಯಾರ್ಥಿಗಳಿರುವುದರಿಂದ ಪ್ರಮಾಣ ಪತ್ರದ ಮೂಲಕ ದೃಢೀಕರಣ ಪತ್ರವನ್ನು ಕೊಡುವುದಕ್ಕೂ ಸಾಧ್ಯವಾಗುವುದಿಲ್ಲ. ಸಾಮಾನ್ಯವಾಗಿ ವಿದ್ಯಾರ್ಥಿಗಳಿಗೆ ಹಲವಾರು ರೀತಿಯ ದೃಢೀಕರಣ ಪತ್ರಗಳು ಬೇಕಾಗುತ್ತವೆ. ಆದುದರಿಂದ, ಶಾಸಕರು ಪಾಸ್‌ಪೋರ್ಟ್‌ಗೆ ರಂಜು ಹಾಕಬೇಕೆಂದು ಮಾಡಿರುವಾಗ ವರಮಾನ ದೃಢೀಕರಣ ಪತ್ರ ಕೊಡುವುದಕ್ಕೂ ಏತಕ್ಕೆ ಮಾಡಬಾರದು? ಸ್ಥಳೀಯ ಜನರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಯೋಗ್ಯ ವಿದ್ಯಾರ್ಥಿಗಳಿಗೆ ಇದನ್ನು ಶಾಸಕರು ಕೊಡುತ್ತಾರೆ. ಆರ್ಜಿ ಫಾರಂನಲ್ಲೇ ಅದಕ್ಕೆ ಸ್ಥಳಾವಕಾಶ ಮಾಡಿಕೊಟ್ಟರೆ ಇದು ಸುಲಭವಾಗಿ ಬಗೆಹರಿಯುತ್ತದೆಂದು ನಾನು ಸಲಹೆ ಕೊಡಬಯಸುತ್ತೇನೆ.

ಶ್ರೀ ಪಿ. ಎನ್. ರೆಡ್ಡಿ.—ಮಾನ್ಯ ಅಧ್ಯಕ್ಷರೇ, ಪ್ರಮಾಣ ಪತ್ರದ ಆಧಾರದ ಮೇಲೆ ವರಮಾನ ದೃಢೀಕರಣ ಪತ್ರ ನೀಡಬೇಕೆಂದು ಮಾಡಿದ್ದು ಹಿಂದಿನ ಸರ್ಕಾರ. ಆಗ ಪ್ರಮಾಣ ಪತ್ರವನ್ನು ಗ್ರಾಮಲೆಕ್ಕಿಗ ಪರಿಶೀಲಿಸಿದ ಮೇಲೆ ರೆವಿನ್ಯೂ ಇನ್‌ಸ್ಪೆಕ್ಟರ್ ಸಹ ಪರಿಶೀಲಿಸಬೇಕು, ಮತ್ತು ಅದನ್ನು ತಹಶೀಲ್ದಾರರ ಕಛೇರಿಯಲ್ಲಿ ತೋರಿಸಿ ಸರ್ಟಿಫಿಕೇಟ್ ಪಡೆಯಬೇಕಿತ್ತು. ಹೀಗಾಗಿ, ಗ್ರಾಮಲೆಕ್ಕಿಗ ಅಥವಾ ರೆವಿನ್ಯೂ ಇನ್‌ಸ್ಪೆಕ್ಟರ್ ೭-೮ ದಿವಸ ಊರಿನಲ್ಲಿಲ್ಲದಿದ್ದರೆ ವಿದ್ಯಾರ್ಥಿಗಳಿಗೆ ದೃಢೀಕರಣ ಪತ್ರ ಸಿಗುತ್ತಿರಲಿಲ್ಲ. ಹೀಗಾಗಿ, ನಮ್ಮ ಭಾಗದ ಸುಮಾರು ಐವತ್ತು ವಿದ್ಯಾರ್ಥಿಗಳು ಐ.ಟಿ.ಐ.ಗೆ ಆರ್ಜಿ ಹಾಕುವುದಕ್ಕೆ ಸಾಧ್ಯವಾಗಲಿಲ್ಲ. ಆದುದರಿಂದ, ಹಿಂದಿನ ಸರ್ಕಾರದ ಪದ್ಧತಿಯನ್ನು ತಕ್ಷಣ ತೆಗೆಯಬೇಕಾಗಿದೆ. ಸರ್ಕಾರಿ ನೌಕರರನ್ನು ಬಿಟ್ಟರೆ ಇನ್ನಿತರ ಎಲ್ಲರೂ ೧೦-೧೫ ರೂಪಾಯಿಗಳನ್ನು ರೆವಿನ್ಯೂ ಇನ್‌ಸ್ಪೆಕ್ಟರಿಗೆ ಕೊಟ್ಟು ತಮಗೆಷ್ಟು ಬೇಕೋ ಅಷ್ಟು, ಅಂದರೆ, ೩,೬೦೦ ರೂ. ಕೆಳಗೆ ವಾರ್ಷಿಕ ವರಮಾನ ದೃಢೀಕರಣ ಪತ್ರವನ್ನು ಪಡೆಯುತ್ತಾರೆ. ಹಾಗೆ ಪಡೆದಲ್ಲಿ ಒಂದೂ ಕೂಡ ತಿರಸ್ಕಾರ ವಾಗುವುದಿಲ್ಲ. ಸುಮ್ಮನೆ ಅನಾವಶ್ಯಕವಾಗಿ ದುಡ್ಡು ಖರ್ಚು ಮಾಡುವುದನ್ನು ತಪ್ಪಿಸಿ, ಪಂಚಾಯತಿ ಸದಸ್ಯರಿಗೆ ಅಥವಾ ಛೇರ್ಮನ್ನರಿಗೆ ಅಥವಾ ಶಾಸಕರಿಗೆ ವರಮಾನ ದೃಢೀಕರಣ ಪತ್ರವನ್ನು ಕೊಡುವ ವ್ಯವಸ್ಥೆಯಾಗುವಂತೆ ಸರ್ಕಾರ ತೀರ್ಮಾನ ತೆಗೆದು ಕೊಳ್ಳಬೇಕೆಂದು ಪ್ರಾರ್ಥನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ನನಗೆ ಮಾನ್ಯ ಸದಸ್ಯರುಗಳ ಸಲಹೆಗಳನ್ನು ಕೇಳಬಾರದೆನ್ನುವ ಉದ್ದೇಶ ಇಲ್ಲ. ಅನೇಕ ಸದಸ್ಯರುಗಳು ಸಲಹೆಗಳನ್ನು ಕೊಡಲು ಸಿದ್ಧರಿದ್ದಾರೆ; ನಾನು ಕೇಳಬೇಕೆಂಬ ಆಸಕ್ತಿಯನ್ನು ಇಟ್ಟುಕೊಂಡಿದ್ದೇನೆ. ಆದರೆ ಸದನದ ಕಾಲವನ್ನು ಹೆಚ್ಚಿಗೆ ಕಳೆಯುವುದು ಬೇಡ. ಮಾನ್ಯ ಸದಸ್ಯರಾದ ಶ್ರೀಮಾನ್ ಲಕ್ಷ್ಮೀಸಾಗರ್‌ರವರು ೩೧೨ನೇ ನಿಯಮದ ಕೆಳಗೆ ಎತ್ತಿರತಕ್ಕ ಪ್ರಶ್ನೆ ಬಹಳ ಗಹನವಾಗಿದೆ. ಅದರಲ್ಲಿ ಬೆಂಗಳೂರು ನಗರದಂತ ನಗರಗಳಲ್ಲಿ ಒತ್ತಡ ಜಾಸ್ತಿಯಾಗಿ ಜನಕ್ಕಳಿಗೆ ಯಾವುದೇ ರೀತಿಯ ಸರ್ಟಿಫಿಕೇಟುಗಳನ್ನು ತೆಗೆದುಕೊಳ್ಳುವುದಕ್ಕೂ ತುಂಬ ಕಷ್ಟವಾಗಿದೆ. ಕೆಲವು ಕಡೆ ನೂಕುನುಗ್ಗಲು ಕೂಡ ಆಗಿ ಲಾಠಿ ಚಾರ್ಜ್ ಆಗಿರುವುದನ್ನು ನೋಡಿಕೊಂಡು ಬಂದಿದ್ದೇನೆಂದು ಲಕ್ಷ್ಮೀಸಾಗರ್ ಅವರು ತಿಳಿಸಿದ್ದಾರೆ. ತುಂಬ ಆತಂಕದಿಂದ ಮಾನ್ಯ ಲಕ್ಷ್ಮೀಸಾಗರ್‌ರವರು ಹೇಳಿದ್ದಾರೆ. ಅದೇ ರೀತಿ ಮಾನ್ಯ ಸದಸ್ಯರುಗಳು ಕೂಡ ಆತಂಕದಿಂದ ತಮ್ಮ ತಮ್ಮ ಭಾಗದಲ್ಲಿರತಕ್ಕ ತೊಂದರೆಗಳು ವ್ಯಕ್ತಪಡಿಸಿದ್ದಾರೆ; ಮಾನ್ಯ ಸದಸ್ಯರೆಲ್ಲರ ಆತಂಕದಲ್ಲಿ ಸರ್ಕಾರವು ಕೂಡ ಭಾಗಿಯಾಗುತ್ತೆ. ಗ್ರಾಮಪಂಚಾಯಿತಿ ಕಾರ್ಯದರ್ಶಿ ಹಾಗೂ ರೆವಿನ್ಯೂ ಇನ್‌ಸ್ಪೆಕ್ಟರ್‌ರವರಿಂದ ವರಮಾನಕ್ಕೆ ಸಂಬಂಧಪಟ್ಟ ಹಾಗೂ ಜಾತಿಗೆ ಸಂಬಂಧಪಟ್ಟ ಸರ್ಟಿಫಿಕೇಟ್‌ಗಳನ್ನು ಪಡೆಯಬೇಕಾದರೆ ಎಷ್ಟು ಕಷ್ಟವಿದೆ ಎನ್ನುವ ವಿಚಾರವನ್ನು ಮಾನ್ಯ ಸದಸ್ಯರುಗಳು ವ್ಯಕ್ತ ಮಾಡಿದ್ದಾರೆ. ಅಲ್ಲದೆ ಹಿಂದೆ ಪಾರ್ಲಿಮೆಂಟಿನ ಸದಸ್ಯರು ಗಳಿಗೆ ಸರ್ಟಿಫಿಕೇಟುಗಳನ್ನು ಕೊಡತಕ್ಕ ಅಧಿಕಾರ ಇತ್ತು; ಈಗ ಅದು ಇಲ್ಲದೇ ಇರುವುದರಿಂದ ಇಷ್ಟೆಲ್ಲಾ ತೊಂದರೆಗೆ ಕಾರಣವಾಗಿದೆ ಎನ್ನುವ ವಿಚಾರವನ್ನು ಕೂಡ ಮಾನ್ಯ ಸದಸ್ಯರುಗಳು ಹೇಳಿದ್ದಾರೆ. ಸರ್ಕಾರ ಗ್ರಾಮಪಂಚಾಯಿತಿ ಕಾರ್ಯದರ್ಶಿಯವರು ಆಯಾಯ ಸರ್ಕಲ್‌ನಲ್ಲಿಯೇ ಇರಬೇಕೆಂದು ಆದೇಶ ಕೊಟ್ಟಿದ್ದೇವೆ; ಹೆಚ್ಚಿಗೆ ತಹಶೀಲ್ದಾರರುಗಳನ್ನು ನೇಮಕ ಮಾಡಿದರೂ ಕೂಡ ತಕ್ಷಣ ಈ ಸಮಸ್ಯೆ ಬಗೆಹರಿಯುವುದಿಲ್ಲ. ದೂರುಗಳು ಬಂದಿರುವ ಕಡೆ ಎಷ್ಟೋ ಜನ ಗ್ರಾಮಪಂಚಾಯಿತಿ ಕಾರ್ಯದರ್ಶಿಗಳನ್ನು ಸಸ್ಪೆಂಡ್

ಮಾಡಿದ್ದೇವೆ. ಕೆಲವು ಕಡೆ ತಪ್ಪಿಸಿಕೊಳ್ಳುವಂತ ಕಳ್ಳರೂ ಇದ್ದಾರೆ. ಮಾನ್ಯ ಅಧ್ಯಕ್ಷರೇ ನಾಳೆ ಬೆಳಿಗ್ಗೆ ೧೦ ಗಂಟೆಗೆ ವಿಧಾನ ಸೌಧದ ಮೂರನೇ ಮಹಡಿಯಲ್ಲಿರುವ ನನ್ನ ಕೊಠಡಿಯಲ್ಲಿ ಪ್ರತಿಪಕ್ಷದ ನಾಯಕರು ಗಳನ್ನು ಆಷ್ಟೇ ಅಲ್ಲದೆ ಆಸಕ್ತಿ ಇರತಕ್ಕ ಎಲ್ಲ ಸದಸ್ಯರುಗಳನ್ನು ಕರೆಸಿಕೊಂಡು ಕೂಡಲೇ ಈ ಸಮಸ್ಯೆಗೆ ಪರಿಹಾರ ಕಂಡುಹಿಡಿಯಬೇಕೆಂದು ತೀರ್ಮಾನ ಮಾಡಿದ್ದೇನೆ. ತಾವುಗಳೆಲ್ಲರೂ ಬಂದು ವಿಚಾರವಿನಿಮಯಂ ಮಾಡಿ ಒಂದು ಅಂತಿಮ ತೀರ್ಮಾನ ತೆಗೆದುಕೊಳ್ಳೋಣ. ಇದಕ್ಕೆ ತಾವುಗಳೆಲ್ಲರೂ ಒಪ್ಪುತ್ತೀರಿ ಎಂದು ಭಾವಿಸಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ.—೫ ರೂಪಾಯಿ ಸ್ಟಾಂಪ್ ಡ್ಯೂಟಿ ಏನು ಫಿಕ್ಸ್ ಮಾಡಿದ್ದೀರಿ ; ಅದನ್ನು ಹರಿಜನ ಗಿರಿಜನರಿಗೆ ವಿನಾಯಿತಿ ಮಾಡಿದ್ದೀರಿ. ಈ ವಿನಾಯಿತಿಯನ್ನು ಎಲ್ಲಾ ವರ್ಗದ ಮಕ್ಕಳಿಗೂ ಅನ್ವಯಿಸುವ ವಿಚಾರ ಸರ್ಕಾರಕ್ಕೆ ಇದೆಯೆ ?

ಶ್ರೀ ಎಸ್. ಬಂಗಾರಪ್ಪ.—ನಾಳೆ ಅದನ್ನು ಕೂಡ ಚರ್ಚೆ ಮಾಡೋಣ.

CALLING ATTENTION TO MATTERS OF URGENT PUBLIC IMPORTANCE

re : Clashes between Indian and Iranian students in B.M.S. Engineering College, Bangalore.

SRI P. RAMDEV (Malleswaram).—Sir, I call the attention of the Chief Minister to the incident that took place at B.M.S. College between students of Iranian and other students and the alleged statement by the Iranian envoy.

SRI R. GUNDU RAO (Chief Minister).—Sir, I wish to make the following statement.

On 26th May 1980, the final year examination of 4th semester course of B.M.S. College of Engineering was being held. At about 11-30 A.M. on that day an Iranian student asked an Indian student to allow him to copy. Iranian student on coming out slapped the Indian student. This incident infuriated the Indian students who set fire to the motorcycle belonging to the Iranian. Following this incident on 27th May 1980 about 100 to 150 BMS College students assembled near the College and assaulted two Iranian students. The injured Iranians were treated in Victoria Hospital and later they went away. After this, some 40 to 50 students went to the B.M.S. College Hostel and damaged some of the rooms occupied by the Iranian students and looted their properties in their absence. The Iranian students had left their rooms without locking and it is possible that some of the outside elements might also have participated in the looting of the properties. On the complaint of seven Iranian Students, 7 criminal cases of rioting and theft have been registered in Hanumanthanagar Police Station. Due to these incidents the college was closed from 27th May 1980 onwards. On 28th May 1980 the Students Union of BMS College held a meeting and decided to intensify their agitation demanding the removal of all Iranian Students from the college and